ಅ) ಎಲಾ ಋತುಗಳಲ್ಲಿ ಎಲ್ಲಾ ಕಡೆಗಳಲ್ಲಿ ಪ್ರವಾಸಿಗರ ಸಂಖ್ಯೆ ಒಂದೇ ಪ್ರಮಾಣದಲ್ಲಿ ಇರುತ್ತದೆಯೇ?

ಇ) ಪ್ರವಾಸಿಗರನ್ನು ಅವಲಂಬಿಸಿ ಜೀವನ ನಡೆಸುತ್ತಿರುವ ಮಾರ್ಗದರ್ಶಿಗಳಿಗೆ ಪ್ರವಾಸಿಗರ ಸಂಖ್ಯೆ ಇಳಿಮುಖವಾದ ಸಂದರ್ಭದಲ್ಲಿ ಇವರ ಉಪ ಜೀವನಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಪ್ರವಾಸಿ ಮಾರ್ಗದರ್ಶಿಗಳ ಜೀವನೋಪಾಯಕ್ಕೆ ತಾವು ತೆಗೆದುಕೊಳ್ಳುವ ಕ್ರಮಗಳು ಯಾವುವು?

ಉ) ಶೀಘ್ರದಲ್ಲಿ ಅವುಗಳನ್ನು ಜಾರಿಗೆ ತರಬಯಸುವಿರಾ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್. (ಪ್ರವಾಸೋದ್ಯಮ, ಕನ್ನಡ ಮತ್ತು ರಾಜ್ಯ ಸಚಿವರು):

ಅ) ಕರ್ನಾಟಕ ಪ್ರವಾಸೋದ್ಯಮ ಇಲಾಖಾವತಿಯಿಂದ ಇದುವರೆಗೆ ಒಟ್ಟು 300 ಮಾರ್ಗದರ್ಶಿಗಳಿಗೆ ತರಬೇತಿ ನೀಡಲಾಗಿದೆ.

ಆ) ಇಲ್ಲ. ಪ್ರವಾಸಿಗರ ಸಂಖ್ಯೆ ಪ್ರಮುಖ ಪ್ರವಾಸಿ ಸ್ಥಳ ಹಾಗೂ ಋತುಗಳ ಮೇಲೆ ಅವಲಂಬಿಸಿರುತ್ತದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ: ಗುಳೇದಗುಡ್ಡ ಪಟ್ಟಣದ ಕಂದಗಲ್ ಹನುಮಂತರಾಯ ಸ್ಮಾರಕ ಭವನದ ನಿರ್ಮಾಣ ಕಾರ್ಯ

2781 (3795)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಪಟ್ಟಣದ ಕಂದಗಲ್ ಹನುಮಂತರಾಯ ಸ್ಮಾರಕ ಭವನ ನಿರ್ಮಾಣ ಕಾರ್ಯವು ಅರ್ಧಕ್ಕೆ ನಿಂತಿದ್ದು ಅದನ್ನು ಪೂರ್ಣಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಅ) ಇದ್ದರೆ, ಎಷ್ಟು ಹಣ ಮಂಜೂರು ಮಾಡಲಾಗುವುದು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಇಲ್ಲ.

ಆ) ಕಂದಗಲ್ಲ ಹನುಮಂತರಾಯ ಸ್ಮಾರಕ ಸಮಿತಿಯ ನೇತೃತ್ವದಲ್ಲಿ ಸ್ಮಾರಕ ಭವನ ನಿರ್ಮಾಣವಾಗುತ್ತಿದೆ. ಇದಕ್ಕೆ ಸರ್ಕಾರವು ಒಟ್ಟು 2.00 ಲಕ್ಷ ರೂ.ಗಳನ್ನು ಧನ ಸಹಾಯವಾಗಿ ನೀಡಿದೆ. ಸದರಿ ಸಮಿತಿಯು ಈ ಕಟ್ಟಡ ನಿರ್ಮಾಣವನ್ನು ಬಿಜಾಪುರ ಜಿಲ್ಲಾಧಿಕಾರಿಗಳಿಗೆ ವಹಿಸಲು ನಿರ್ಣಯಿಸಿರುತ್ತದೆ. ಹಸ್ತಾಂತರವಾದ ನಂತರ ಅವಶ್ಯಕ ಹಣ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ವಿಷಯ: ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದಲ್ಲಿ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾ ಸಲಕರಣೆ ಒದಗಿಸುವುದು.

2782 (3794)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ವತಿಯಿಂದ ಗುಳೇದಗುಡ್ಡ ಮತಕ್ಷೇತ್ರದಲ್ಲಿರುವ ಸಂಘ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳಿಂದ ಎಷ್ಟು ಅನುದಾನ ಕೊಡಲಾಗಿದೆ? (ವರ್ಷವಾರು ವಿವರ ನೀಡುವುದು)

ಆ) ಮೂರು ವರ್ಷಗಳಿಂದ ಈ ಮತಕ್ಷೇತ್ರದಲ್ಲಿರುವ ಯಾವ ಯಾವ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾ ಸಲಕರಣೆ ಒದಗಿಸಲಾಗಿದೆ?

ಶ್ರೀ ಅಜಯಕುಮಾರ ಸರ್‌ನಾಯಕ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಕಳೆದ ಮೂರು ವರ್ಷಗಳಿಂದ ಸಂಘ ಸಂಸ್ಥೆಗಳಿಗೆ ಅನುದಾನ ನೀಡಿರುವುದಿಲ್ಲ.

ಆ) ಎಸ್.ಎನ್.ಕೆ. ಸ್ಪೋರ್ಟ್ಸ್ ಕ್ಲಬ್, ಗುಳೇದಗುಡ್ಡಕ್ಕೆ 1994-95ನೇ ಸಾಲಿನಲ್ಲಿ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಜಿಲ್ಲಾ ಪಂಚಾಯತ್‌ವತಿಯಿಂದ ಈ ಕೆಳಕಂಡ ಕ್ರೀಡಾ ಸಲಕರಣೆಗಳನ್ನು ನೀಡಿರುತ್ತಾರೆ: